**ಶ್ರೀ ಬಂಡೆಪ್ಪ ಕಾಶಂಪೂರ್** ಇವತ್ತು ಇಡೀ ರಾಜ್ಯದಲ್ಲಿ 532 ಪೋಸ್ಟ್‌ಗಳು ಖಾಲಿ ಇದ್ದು ಇದಕ್ಕೆ ಈಗಾಗಲೇ ಏನು ಅಪ್ರೂವಲ್ ಸಿಕ್ಕಿದೆ, ಆ ಪ್ರಕಾರವಾಗಿ ನಾವು ಮುಂದಿನ ಎರಡೂವರೆ ತಿಂಗಳಿನಲ್ಲಿ ಆ ಪೋಸ್ಟ್‌ಗಳನ್ನು ಫಿಲ್ ಅಪ್ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಸದನಕ್ಕೆ ಹೇಳಬಯಸುತ್ತೇನೆ

**ತುಂಗಭದ್ರಾ ನದಿಯಿಂದ ಕುಡಿಯುವ ನೀರು ಪೂರೈಸುವ ಯೋಜನೆ**

58(257) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಗ್ರಾಮೀಣ ನೀರು, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮುಂಡರಗಿ ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಕೆಲಸ ಎಂದಿನಿಂದ ಪ್ರಾರಂಭವಾಗಿದೆ ,

ಆ) ಈ ಕೆಲಸ ಮುಗಿಸಿ ಎಂದಿನಿಂದ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು ,

ಇ) ಯೋಜನೆಯಲ್ಲಿ ಅವ್ಯವಹಾರ ಆಗಿರುವುದು ನಿಜವೇ ,

ಈ) ಹಾಗಿದ್ದಲ್ಲಿ, ಎಷ್ಟು ಲಕ್ಷ ಆಗಿದೆ , (ವಿವರ ನೀಡುವುದು) ,

ಉ) ತಪ್ಪಿತಸ್ಥರು ಯಾರ್ಯಾರು ಮತ್ತು ಅವರ ಮೇಲೆ ಕೈಗೊಂಡ ಕ್ರಮಗಳೇನು ?

**ಶ್ರೀ ಎಸ್ ಎ ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)**

ಅ) ಮುಂಡರಗಿ ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ 7 ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯ ಕಾಮಗಾರಿಯನ್ನು ದಿನಾಂಕ 19 03 2001ರಲ್ಲಿ ಪ್ರಾರಂಭಿಸಲಾಗಿದೆ

ಆ) ಸದರಿ ಯೋಜನೆಯ ಬಹುತೇಕ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಅಂತಿಮ ಘಟ್ಟದ ಕಾಮಗಾರಿಗಳು ಬಾಕಿ ಉಳಿದಿರುತ್ತವೆ ಬಿದರಹಳ್ಳಿ ಮತ್ತು ಮುಂಡವಾಡ ಗ್ರಾಮಗಳಿಗೆ ಈಗಾಗಲೇ ಕುಡಿಯುವ ನೀರು ಪೂರೈಸಲಾಗುತ್ತಿದ್ದು, ಚಿಕ್ಕವಡ್ಡಟ್ಟಿಯವರೆಗೆ ಅಲ್ಲಲ್ಲಿ ಸೋರಿಕೆಗಳಿವೆ ಅವುಗಳನ್ನು ಸರಿಪಡಿಸಿ ಎಲ್ಲಾ ಗ್ರಾಮಗಳಿಗೂ ನೀರು ಪೂರೈಕೆ ಮಾಡಲಾಗುವುದು

ಇ) ಮತ್ತು ಈ) ಬಾಗೇವಾಡಿ, ಮುರಡಿ, ಚಿಕ್ಕವಡ್ಡಟ್ಟಿ ಗ್ರಾಮಗಳ ಏರುಕೊಳವೆ ಮಾರ್ಗದಲ್ಲಿ ರೂ 13 52 ಲಕ್ಷ ಗುತ್ತಿಗೆದಾರರಿಗೆ ಹೆಚ್ಚುವರಿಯಾಗಿ ಸಂದಾಯ ಮಾಡಲಾಗಿದ್ದು ಗುತ್ತಿಗೆದಾರರ ಮುಂಗಡ ರೇವಣಿ ರೂ 46 73 ಲಕ್ಷಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಬಾಕಿ ಕಾಮಗಾರಿಗಳಿಗೆ ಮರುಟೆಂಡರನ್ನು ದಿನಾಂಕ 27 1 2007 ರಂದು ಕರೆಯಲಾಗಿದೆ

ಉ) ಗುತ್ತಿಗೆದಾರರಾದ ಮೆ ಜಿ ವಿ ಪಿ ಆರ್ ಇಂಜಿನಿಯರ್ಸ್, ಹೈದರಾಬಾದ್ ಇವರು ಕಾಮಗಾರಿಯಲ್ಲಿ ವಿಳಂಬ ಮಾಡಿರುವುದರಿಂದ, ಗುತ್ತಿಗೆ ರದ್ದುಪಡಿಸಿ ಇವರ ಮುಂಗಡ ರೇವಣಿ ರೂ 46 73 ಲಕ್ಷಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಪ್ರಕಾಶ್‌ರವರು ಈ ಕಡೆಗೆ ತಾವು ನೋಡಬೇಕು ಏಕೆಂದರೆ, ನೀವು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ನಾನು ಮಂತ್ರಿಯಾಗಿದ್ದಾಗ ಇದಕ್ಕೆ ಅಡಿಗಲ್ಲು ಹಾಕಿದ್ದು 2001 ರಲ್ಲಿ ಇದನ್ನು ಇವರು ಪ್ರಾರಂಭಿಸಿದರು ನನ್ನ ಪ್ರಶ್ನೆ ಏನೆಂದರೆ, ಮುಂಡರಗಿ ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಕೆಲಸ ಎಂದಿನಿಂದ ಪ್ರಾರಂಭವಾಗಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಇವರು 2001 ರಿಂದ ಪ್ರಾರಂಭವಾಗಿದೆಂದು ಉತ್ತರ ಕೊಟ್ಟಿದ್ದಾರೆ ನಂತರ ಈ ಕೆಲಸ ಮುಗಿಸಿ ಎಂದಿನಿಂದ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುವುದು ಎಂದು ಕೇಳಿದ್ದಕ್ಕೆ ಏನು ಉತ್ತರ ಕೊಟ್ಟಿದ್ದಾರೆಂದರೆ ಸದರಿ ಯೋಜನೆಯ ಬಹುತೇಕ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು , ಅಂತಿಮ ಘಟ್ಟದ ಕಾಮಗಾರಿಗಳು ಬಾಕಿ ಉಳಿದಿರುತ್ತವೆ ಬಿದರಹಳ್ಳಿ ಮತ್ತು ಮುಂಡವಾಡ ಗ್ರಾಮಗಳಿಗೆ ಈಗಾಗಲೇ ಕುಡಿಯುವ ನೀರು ಪೂರೈಸಲಾಗುತ್ತಿದ್ದು, ಚಿಕ್ಕವಡ್ಡಟ್ಟಯವರಗೆ ಅಲ್ಲಲ್ಲಿ ಸೋರಿಕೆಗಳಿವೆ ಅವುಗಳನ್ನು ಸರಿಪಡಿಸಿ ಎಲ್ಲಾ ಗ್ರಾಮಗಳಿಗೂ ನೀರು ಪೂರೈಕೆ ಮಾಡಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ ಅದರಲ್ಲಿ ಯಾವತ್ತು ನೀರು ಕೊಡುತ್ತಾರೆನ್ನುವುದು ಇಲ್ಲ ಅದನ್ನೆಲ್ಲಾ ಸರಿಪಡಿಸಿದ ಮೇಲೆ ಕೊಡುತ್ತೇವೆ ಎಂದು ಹೇಳಿದ್ದಾರೆ ನಾನು 2005 ನೇ ಸಾಲಿನಲ್ಲಿ ಒಂದು ಪ್ರಶ್ನೆ ಹಾಕಿದ್ದೆ ಇದು ಹಾಗೆಯೇ ಪ್ರತಿ ಅಸೆಂಬ್ಲಿಗೆ ಒಂದು ಪ್ರಶ್ನೆ ಇದ್ದೇ ಇರುತ್ತದೆ 21–3–2005 ಕ್ಕೆ ಒಂದು ಉತ್ತರ ಕೊಟ್ಟಿದ್ದಾರೆ ಏನೆಂದರೆ, ಮುಂಡರಗಿ

ತಾಲ್ಲೂಕು ಬಿದರಹಳ್ಳಿ ಹಾಗೂ ಇತರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಯ ಕೆಲಸ ಪ್ರಾರಂಭವಾಗಿ ಕಾಮಗಾರಿ ಪೂರ್ಣಗೊಳ್ಳದಿರುವುದು ನಿಜ ಅಲ್ಲವೆ? ಎಂದು ಕೇಳಿದ್ದಕ್ಕೆ ಆಗ ಇವರು ಹೌದು ಎಂದು ಉತ್ತರ ಕೊಟ್ಟಿದ್ದಾರೆ ಹಾಗಿದ್ದರೆ ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ನೀರನ್ನು ಒದಗಿಸಲಾಗುವುದು ಎಂದು ಕೇಳಿದ್ದಕ್ಕೆ ಜುಲೈ 2005 ರೊಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಕೊಟ್ಟಿದ್ದಾರೆ ಮೂರು ತಿಂಗಳೂಳಗೆ ಮುಗಿಸುತ್ತೇವೆಂದು ಆಗ ಹೇಳಿದ್ದರು ಆದರೂ ಇನ್ನೂ ಹಾಗೆಯೇ ಇದೆ ಈಗ ಇವರು ಏನು ಹೇಳಿದ್ದಾರೆಂದರೆ, ಯಾವಾಗ ಮುಗಿಸುತ್ತೇವೆಂದು ಹೇಳಲೇ ಇಲ್ಲ ಅಧಿಕಾರಿಗಳು ಬಹಳ ಬುದ್ದಿವಂತರು ಇದ್ದಾರೆ ನಿಮ್ಮ ಅಧಿಕಾರಿಗಳು, ಹೇಗೋ ಇದು ಮುಗಿಯುವುದಿಲ್ಲ ಸುಮ್ಮನೆ ಏಕೆ ಸುಳ್ಳು ಹೇಳಬೇಕು ಎನ್ನುತ್ತಾರೆ ಅಂದು ಅಡಿಗಲ್ಲು ಹಾಕಿದಂಥ ಸಂದರ್ಭದಲ್ಲಿ ಮಾನ್ಯ ಪ್ರಕಾಶ್‌ರವರು ಹಾಗೂ ನಾವು, ಇಲ್ಲಿ ಫ್ಲೂರೈಡ್ ಇದ್ದು ಬಹಳ ತೊಂದರೆಯಿದೆ ಎಂದು ಕೂಡಲೇ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿ, ಕೆಲಸ ಚಾಲೂ ಮಾಡಿಸಿ ಬಂದರೆ, ಆ ದಿವಸ ಅಧಿಕಾರಿಗಳಿಗೆ ಏನು ಹೇಳಿ ಬಂದೆವು ಎಂದರೆ, ಮೊದಲು ಹೊಳೆಗೆ ಪಂಪ್ ಕೂಡಿಸಿ ಒಂದೊಂದೆ ಊರಿಗೆ ನೀರು ಕೊಟ್ಟುಕೊಂಡು ಹೋಗಿ ಎಂದು ಹೇಳಿದೆವು ಆದರೆ ಅಧಿಕಾರಿಗಳು ಏನು ಮಾಡಿದರು ಎಂದರೆ, ಮೊದಲು ಪೈಪ್‌ಲೈನ್‌ಗೆ ಅದರ ದುಡ್ಡು ತೆಗೆದು ಕೊಟ್ಟರು ಇವತ್ತಿಗೂ ಅದು ಮುಗಿದಿಲ್ಲ ಮುಂದೆ ಏನಾಗಿದೆ ಎಂಬುದನ್ನು ನಾನು ಓದುತ್ತೇನೆ ಬಿದರಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಕೆಲಸ ಎಂದಿನಿಂದ ಪ್ರಾರಂಭವಾಗಿದೆ ಎಂದು ಕೇಳಿದ್ದಕ್ಕೆ 2001 ರಲ್ಲಿ ಪ್ರಾರಂಭಿಸಲಾಗಿದೆ ಎಂದು ಉತ್ತರಿಸಿದ್ದಾರೆ

**ಅಧ್ಯಕ್ಷರು** ಪಾಟೀಲ್‌ರೆ ಹೀಗೆ ಓದಿಕೊಂಡು ನಿಂತರೆ ಹೇಗೆ ! ಪ್ರಶ್ನೆ ಕೇಳಿ ಅವರು ಉತ್ತರ ಹೇಳಲಿ

**ಶ್ರೀ ಎಸ್ ಎಸ್ ಪಾಟೀಲ್** ನಾನು ಈ ಯೋಜನೆಯಲ್ಲಿ ಅವ್ಯವಹಾರ ಆಗಿರುವುದು ನಿಜವೇ ಎಂದು ಕೇಳಿದ್ದಕ್ಕೆ ನಿಜ ಎಂದಾದರೂ ಹೇಳಬೇಕು ಇಲ್ಲವೇ ಇಲ್ಲವೆಂದಾದರೂ ಹೇಳಬೇಕು ಒಂದು ಪಕ್ಷ ಅವ್ಯವಹಾರ ಆಗಿದ್ದಲ್ಲಿ ಎಷ್ಟು ಲಕ್ಷವಾಗಿದೆ? ಎಂದು ಕೇಳಿದ್ದಕ್ಕೆ ಅವರು ಇವೆರೆಡರ ನಡುವೆ ಒಂದು ಉತ್ತರ ಕೊಡುತ್ತಾರೆ ಏನೆಂದರೆ, ಬಾಗೇವಾಡಿ,

ಮುರಡಿ, ಚಿಕ್ಕವಡ್ಡಟ್ಟ ಗ್ರಾಮಗಳ ಏರುಕೊಳವೆ ಮಾರ್ಗದಲ್ಲಿ ರೂ 13 52 ಲಕ್ಷ ಗುತ್ತಿಗೆದಾರರಿಗೆ ಹೆಚ್ಚುವರಿಯಾಗಿ ಸಂದಾಯವಾಗಿರುತ್ತದೆ ಮುಂಗಡ ರೇವಣಿ 46 73 ಲಕ್ಷಗಳನ್ನು ಹಿಡಿದಿರುತ್ತೇವೆ ಅಂದರೆ, ಇದರಲ್ಲಿ ಏನು ಆಗಿಲ್ಲ 13 ಲಕ್ಷ ಹೆಚ್ಚು ಕೊಟ್ಟಿದ್ದಕ್ಕೆ ನಮ್ಮ ಹತ್ತಿರ ಅವರ ರೇವಣಿ 46 ಲಕ್ಷ ರೂಪಾಯಿ ಇದೆ ಎಂದು ಹೇಳಿದರು ಇಲ್ಲಿ ನಾನು ಲೆಟರ್ ಬರೆದಾದ ಮೇಲೆ ಮಾನ್ಯ ಮಂತ್ರಿಗಳು ವಿಚಾರಣೆಗೆ ಕಳುಹಿಸಿದ ಮೇಲೆ ಅವರೇ ನನಗೆ ಉತ್ತರ ಕೊಡುತ್ತಾರೆ ಮಾನ್ಯ ಮಂತ್ರಿಗಳೇ, ತಮಗೂ ಬಂದಿರಬಹುದು ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಲೆಟರ್ ಬರೆದು ಸುಮಾರು ಇದರಲ್ಲಿ 77 ಲಕ್ಷ ರೂಪಾಯಿ ಅವ್ಯವಹಾರ ಆಗಿದೆ ಎಂದು ಬರೆಯುತ್ತಾನೆ 77,39,680–00 ರೂಪಾಯಿಗಳನ್ನು ಮುಂಗಡವಾಗಿ ಕೆಲಸ ಮಾಡಿದವನಿಗೆ ಕೊಟ್ಟಿದ್ದೇವೆಂದು ಬರೆಯುತ್ತಾನೆ ಇದನ್ನೆಲ್ಲಾ ಓದಿದರೆ ಟೈಂ ಆಗಿದೆ ಎಂದು ತಾವು ಹೇಳುತ್ತೀರಿ ಪೈಪ್‌ಲೈನ್ ಆಳವಡಿಸದೆ ಹಾಗೆ ದುಡ್ಡು ತೆಗೆದುಕೊಂಡಿದ್ದಾರೆ ಪೈಪ್ ಮೂರು ಫೂಟ್ ಹಾಕಬೇಕಾಗಿದ್ದರೆ ಇವರು ಒಂದೇ ಪೂಟ್ ಹಾಕಿದ್ದಾರೆ ಇದನ್ನೆಲ್ಲಾ ನಿಮ್ಮ ಇಂಜಿನಿಯರ್ಸ್ ಮಾಡಿರುವುದರಿಂದ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಅವ್ಯವಹಾರ ಆಗಿದೆ ಇಲ್ಲಿ ಮತ್ತೊಂದು ಕಡೆ ಹೇಳುತ್ತಾರೆ, ಈವರೆಗೆ 566 ಲಕ್ಷ ರೂಪಾಯಿಗಳನ್ನು ಸಂದಾಯ ಮಾಡಿದ್ದಾರೆ ಅಂದರೆ, ಆರು ಕೋಟಿ ರೂಪಾಯಿಯ ಯೋಜನೆಯಲ್ಲಿ 566 ಲಕ್ಷ ರೂಪಾಯಿಗಳನ್ನು ಕೊಟ್ಟು ಬಿಟ್ಟಿದ್ದಾರೆ "ಗುತ್ತಿಗೆದಾರರಿಂದ ಹಾಲಿ ನಿರ್ವಹಿಸುತ್ತಿರುವ ಬೇರೆ ಕಾಮಗಾರಿಗಳಿಂದ ವಸೂಲಿ ಮಾಡುತ್ತೇವೆ" 566 ಲಕ್ಷ ರೂಪಾಯಿಗಳನ್ನು ಇವರು ವಸೂಲು ಮಾಡುತ್ತಾರೆಂದರೆ ಸಂಪೂರ್ಣವಾಗಿ ಇದರಲ್ಲಿ ಅವ್ಯವಹಾರ ಆಗಿದೆ ಎಂದಾಯಿತು ಅಲ್ಲವೆ? ಮಾನ್ಯ ಮಂತ್ರಿಗಳು ಸುಮ್ಮನೆ ಅಧಿಕಾರಿಗಳು ಏನೋ ಬರೆದು ಕೊಟ್ಟಿದ್ದನ್ನು ಸಹಿ ಹಾಕಿ ನೀವು ಇಲ್ಲಿ ಉತ್ತರ ಕೊಟ್ಟರೆ, ಇದಕ್ಕೆ ಯಾರು ಜವಾಬ್ದಾರಿ? ಅವ್ಯವಹಾರ ಆಗಿದೆ ಅಥವಾ ಇಲ್ಲ ಎಂದು ತಾವು ನಿಖರವಾಗಿ ಹೇಳಬೇಕು ಅವ್ಯವಹಾರ ಆಗಿದೆ ಎಂದಾದರೂ ಹೇಳಿ ಇಲ್ಲಾಂದ್ರೆ ಇಲ್ಲವೆಂದು ಹೇಳಿರಿ ನಿಮ್ಮವರು ಎರಡೂ ಹೇಳಲಿಲ್ಲ ಸುಮಾರು ಒಂದು ಕೋಟಿ ರೂಪಾಯಿನಷ್ಟು ಅವ್ಯವಹಾರ ಆಗಿ, ಅದರಿಂದ ಬೇರೆ ಕಡೆಗೆ ದುಡ್ಡು ತೆಗೆದು ಬಿಲ್‌ಗೆ ಅಡ್ವಾನ್ಸ್‌ಗೆ ಹಣ ಕೊಟ್ಟರೆ ಅದು ಅವ್ಯವಹಾರ ಅಲ್ಲವೆ? ಇದು ಇವತ್ತಿನ ಪರಿಸ್ಥಿತಿ, ಅದಕ್ಕೆ ಮಾನ್ಯ ಮಂತ್ರಿಗಳು ನೇರವಾಗಿ ಉತ್ತರ ಕೊಡಬೇಕು ಅವ್ಯವಹಾರ ಎಷ್ಟು ಆಗಿದೆ? ಯಾರ್ಯಾರು ಅಧಿಕಾರಿಗಳು

ಇದಕ್ಕೆ ಜಬಾಬ್ದಾರಿ ಯಾರು ಅವರ ಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ? ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರಲ್ಲಿ ಚೀಪ್ ಇಂಜಿನಿಯರ್‌ವರೆಗೆ ಸಿಗುತ್ತಾರೆ ಎಲ್ಲರೂ ಏನೇನು ಮಾಡಿ ಅಲ್ಲಿ ದುಡ್ಡು ತೆಗೆದು ಬಿಟ್ಟಿದ್ದಾರೆ ಮಾನ್ಯ ಪ್ರಾಕಾಶ್‌ರವರು ದಯಮಾಡಿ ಇದರ ಬಗ್ಗೆ ಲಕ್ಷ್ಯ ಇಡಬೇಕು ಇದು ನೀವು ಮಾಡಿದ್ದು, ಆ ಕಾಲಕ್ಕೆ ಹಳ್ಳಿಗಳಿಗೆ ನೀರು ಸಿಗಲಿ ಎಂದು ಕೆಲಸ ಚಾಲೂ ಮಾಡಿ ಹೋದರೆ, ಇವತ್ತಿಗೆ ಆರು ವರ್ಷವಾದರೂ ಮುಗಿದಿಲ್ಲ ಇನ್ನೂ ಮುಗಿಸುತ್ತೇವೆಂದು ಹೇಳುತ್ತಿಲ್ಲ

**ಅಧ್ಯಕ್ಷರು** ಉತ್ತರ ಹೇಳಿ ಸ್ವಾಮಿ, ಪಾಟೀಲ್‌ರನ್ನು ಹಾಗೆಯೇ ಬಿಟ್ಟರೆ ಇನ್ನು ಹತ್ತು ನಿಮಿಷ ಕೇಳುತ್ತಾರೆ

**ಶ್ರೀ ಎಸ್ ಎಸ್ ಪಾಟೀಲ್** ಇದಕ್ಕೆ ಏನು ಮಾಡುತ್ತೀರಿ? ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೀರಿ? ಅವರು ಹಾಗೆ ಸುಳ್ಳು ಹೇಳುತ್ತಾರೆ, ಅಸೆಂಬ್ಲಿಯಲ್ಲಿ ತಪ್ಪು ಉತ್ತರ ಕೊಟ್ಟರೆ ಇದಕ್ಕೆ ಯಾರು ಜವಾಬ್ದಾರರು ? ಇದಕ್ಕೆ ನೇರವಾಗಿ ನೀವು ಹೊಣೆಯಾಗುತ್ತೀರಿ

**ಅಧ್ಯಕ್ಷರು** ಪಾಟೀಲ್‌ರೆ, ನೀವು ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ

**ಶ್ರೀ ಎಸ್ ಎಸ್ ಪಾಟೀಲ್** ಹೌದು, ಎಂದು ಹೇಳುತ್ತೇನೆ, ಆ ಅಧಿಕಾರಿಗಳು ತಪ್ಪಾಗಿ ಉತ್ತರ ಕೊಡುತ್ತಾರೆ.

**ಅಧ್ಯಕ್ಷರು** ಎಲ್ಲರೂ ಕೂಡ ಅಧಿಕಾರಿಗಳು ಬರೆದು ಕೊಟ್ಟಿರುವುದನ್ನೇ ಓದುವುದು ಈ ವ್ಯವಸ್ಥೆಯಲ್ಲಿ ಈ ಅಧಿಕಾರಿಷಾಹಿಯನ್ನು ಎಲ್ಲರೂ ಸೇರಿ ಎಷ್ಟು ಬಲಪಡಿಸಿದ್ದಾರೆಂಬುದು ನಿಮಗೂ ಗೊತ್ತಿದೆ, ಈ ಕಡೆಯವರಿಗೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ ಹೀಗಾಗಿ ಅದನ್ನು ಬಿಡಿ ತಾವು ಉತ್ತರ ಹೇಳಿ ಸ್ವಾಮಿ

**ಶ್ರೀ ಎಸ್ ಎಸ್ ಪಾಟೀಲ್** ನಾನು ಪ್ರಾಮಾಣೀಕವಾಗಿ ಹೇಳುತ್ತೇನೆ ನಾನು ಅಧಿಕಾರಿ ಬರೆದಿರುವುದನ್ನು ಓದಿಲ್ಲ

**ಅಧ್ಯಕ್ಷರು** ಹೌದು ಸ್ವಾಮಿ ಒದೆಯುವುದಕ್ಕೆ ಶಕ್ತಿ ಎಲ್ಲಿದೆ ಸ್ವಾಮಿ? ಕಾಲುಗಳೆಲ್ಲ ಬಿದ್ದುಹೋಗಿವೆ ನೋಡಿ ಸ್ವಾಮಿ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರಿಗೆ ಒದೆಯತಕ್ಕಂಥ ಕಾಲುಗಳು ಬಿದ್ದು ಹೋಗಿವೆ ಒದೆಯುವದಕ್ಕೆ ಆಗುವುದಿಲ್ಲ ಬಿಡಿ ತಾವು ಉತ್ತರ ಹೇಳಿ

**ಶ್ರೀ ಎಸ್ ಎ ರವೀಂದ್ರನಾಥ್** ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

**ಶ್ರೀ ಎಸ್ ಎಸ್ ಪಾಟೀಲ್** ಮಂತ್ರಿಗಳ ಬಗ್ಗೆ ನಮ್ಮ ತಕರಾರು ಇಲ್ಲ, ಆದರೆ ಯಾರು ತಪ್ಪು ಮಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು

**ಅಧ್ಯಕ್ಷರು** ಅಯಿತು ಅವರು ಹೇಳುತ್ತಾರೆ ಬಿಡಿ

**ಶ್ರೀ ಎಸ್ ಎ ರವೀಂದ್ರನಾಥ್** ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ಮನೆಗೆ ಕಳುಹಿಸತಕ್ಕಂಧ ಕೆಲಸ ನಾನು ಮಾಡುತ್ತೇನೆ

**ಕೃಷಿಮಾರುಕಟ್ಟೆಗಳಿಗೆ ಅಧಿಕಾರ ನೀಡುವುದು**

59(134) ಶ್ರೀ ಡಿ ಆರ್ ಪಾಟೀಲ್ (ಗದಗ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಈಗಿರುವ ವ್ಯವಸ್ಥೆಯಲ್ಲಿ ಕೃಷಿ ಮಾರುಕಟ್ಟೆಗಳಿಗೆ ಕಾನೂನಿನಲ್ಲಿರುವ ಸ್ವಾಯತ್ತತೆಯನ್ನು ಸುತ್ತೋಲೆಗಳ ಹಾಗೂ ನಿಯಮಗಳ ಮುಖಾಂತರ ಮೊಟಕುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ರೀತಿ ಶಾಸಕಾಂಗ ನೀಡಿರುವ ಅಧಿಕಾರವನ್ನು ಪುನಃ ಕೃಷಿ ಮಾರುಕಟ್ಟೆಗಳಿಗೆ ಕೂಡಲು ಸರ್ಕಾರ ಕ್ರಮ ಕೈಗೊಳ್ಳುವುದೆ ,

ಇ) ಸರ್ಕಾರದ ಯಾವುದೇ ಅನುದಾನವಿಲ್ಲದಿದ್ದರೂ ಅನುದಾನ ಪಡೆಯುತ್ತಿರುವ ಪಂಚಾಯತ್ ರಾಜ್ ಸಂಸ್ಥೆಗಳಿಗಿಂತ ಕಡಿಮೆ ಸ್ವಾಯತ್ತತೆಯನ್ನು ಈ ಸಂಸ್ಥೆಗಳು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ,

ಈ) ಕೃಷಿ ಮಾರುಕಟ್ಟೆ ಸಂಸ್ಥೆಗಳಿಗೆ ಇನ್ನು ಹೆಚ್ಚಿನ ಅಧಿಕಾರ ಕೊಟ್ಟು ಕೃಷಿಕರಿಗೆ ಬೇಕಾಗಿರುವ ಸೌಲಭ್ಯ ಒದಗಿಸಲು ಹಾಗೂ ಈಗಿರುವ ಮಾರುಕಟ್ಟೆ ವ್ಯವಸ್ಥೆಯಲ್ಲಿ ಆಗುತ್ತಿರುವ ಶೋಷಣೆ ತಪ್ಪಿಸಲು ತೀವ್ರ ಕ್ರಮ ಕೈಗೊಳ್ಳಲಾಗುವುದೇ ?

**ಶ್ರೀ ಶರಣಬಸಪ್ಪ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು)**

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ